**2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು**

**ಸಿ.ಸಿ 1795-2018** **ಸಿ. ಡಬ್ಲುಃ 11**

**ಪಿ. ಡಬ್ಲುಃ 02**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ಗಂಡನ ಹೆಸರು<br>ವಯಸ್ಸು<br>ಕೆಲಸ<br><br>ವಾಸ | ಹರೀಶ್ ಹೆಚ್<br>ಹನುಮಯ್ಯ<br>38 ವರ್ಷ<br>ನಿರ್ವಾಹಕ, ಕೆ.ಎಸ್.ಆರ್.ಟಿ.ಸಿ ಡಿಪೋ<br>ನಂಜನಗೂಡು<br>ಅರಕಲಗೂಡು, ಹಾಸನ ಜಿಲ್ಲೆ |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 24-07-2024** |

**ಮುಖ್ಯ ವಿಚಾರಣೆಃ ಶ್ರೀ. ಎಪಿಪಿ ವಕೀಲರಿಂದಃ**

ನಾನು 2016 ರಿಂದ ಇಲ್ಲಿಯವರೆವಿಗೂ ನಂಜನಗೂಡಿನ ಕೆ.ಎಸ್.ಆರ್.ಟಿ.ಸಿ ಡಿಪೋದಲ್ಲಿ ನಿರ್ವಾಹಕನನ್ನಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ದಿ.18-09 -2018 ರಂದು ನನ್ನನ್ನು ಮತ್ತು 1 ನೇ ಆರೋಪಿಯನ್ನು ಮಾರ್ಗ ಸಂ.129 ನಂಜನಗೂಡು-ಮಹದೇಶ್ವರ ಬೆಟ್ಟ ಮಾರ್ಗಕ್ಕೆ ಕೆಎ-10-ಎಫ್-0209 ಕೆ.ಎಸ್.ಆರ್.ಟಿ.ಸಿ ಬಸ್ಸಿಗೆ ನಿರ್ವಾಹಕ ಹಾಗೂ ಚಾಲಕನನ್ನಾಗಿ ನೇಮಕ ಮಾಡಿದ್ದು ಬೆಳಗ್ಗೆ 10.30 ರ ಸಮಯದಲ್ಲಿ ಹೊಸ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಕ್ಕೆ ಬಸ್ಸು ಹೋಗುತ್ತಿರಬೇಕಾದರೆ ನಾನು ಟ್ರಿಫ್ ಶೀಟ್ ಅನ್ನು ಬರೆದುಕೊಳ್ಳುತ್ತಿದ್ದು ಆಗ ಸಾರ್ವಜನಿಕರು ಕೂಗಿಕೊಳ್ಳುತ್ತಿದ್ದು ಬಸ್ಸನ್ನು ನಿಲ್ಲಿಸಿ ಕೆಳಗೆ ಇಳಿದು ನೋಡಿದಾಗ ಯಾರೋ ವ್ಯಕ್ತಿ ಬಸ್ಸಿನ ಚಕ್ರದಡಿ ಸಿಲುಕಿಕೊಂಡಿರುವುದು ಕಂಡುಬಂದಿತು. ಬಸ್ಸು ಡಿಪೋಗೆ ಹೋಗುತ್ತಿದ್ದುದ್ದರಿಂದ ನಮ್ಮ ಬಸ್ಸಿನ ಚಾಲಕ

ಬಸ್ಸನ್ನು ನಿಧಾನವಾಗಿಯೇ ಚಾಲನೆ ಮಾಡುತ್ತಿದ್ದರು ನಮ್ಮ ಬಸ್ಸಿನ ಅರ್ಧಭಾಗ ಡಿಪೋದ ಒಳಗಡೆ ಇತ್ತು ನಮ್ಮ ಬಸ್ಸಿನ ಚಾಲಕನ ತಪ್ಪಿನಿಂದ ಯಾವುದೇ ಅಪಘಾತವಾಗಿರುವುದಿಲ್ಲ. ಅಪಘಾತದ ಸಂಬಂಧ ಆರೋಪಿ ವಿರುದ್ಧ ದೂರು ದಾಖಲಾಗಿರುವ ವಿಚಾರ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಸಸಅ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿಸಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು)

**<u>ಪಾಟೀ ಸವಾಲುಃ ಶ್ರೀ. ಎಪಿಪಿ ಯವರಿಂದ</u>**

ಆರೋಪಿ ಬಸ್ಸನ್ನು ನಂಜನಗೂಡು-ಚಾಮರಾಜನಗರ ಮುಖ್ಯ ರಸ್ತೆ ಬೈಪಾಸ್ ರಸ್ತೆಯಲ್ಲಿ ಇರುವ ಹೊಸದಾದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಿಂದ ಪಕ್ಕದಲ್ಲಿರುವ ಡಿಪೋಗೆ ಹೋಗಲು ಬಸ್ಸನ್ನು ನಿಲ್ದಾಣದಿಂದ ಹೊರಗೆ ಹೋಗುವ ಗೇಟಿನ ಮುಂಭಾಗ ಅತೀ ವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಹೋಗುವಾಗ ರಸ್ತೆಯ ಎಡಭಾಗ ಖಾಸಗಿ ಬಸ್ ನಿಲ್ದಾಣದ ಕಡೆಯಿಂದ ಅಪೋಲೋ ಸರ್ಕಲ್ ಕಡೆಗೆ ನಡೆದುಕೊಂಡು ಹೋಗುತ್ತಿದ್ದ ಒಬ್ಬ ವ್ಯಕ್ತಿಗೆ ಬಸ್ಸಿನ ಹಿಂಭಾಗದ ಎಡಭಾಗದ ಬಾಡಿಯಿಂದ ತಗುಲಿದು ಆತ ಕೆಳಕ್ಕೆ ಬಿದ್ದಾಗ ಬಸ್ಸಿನ ಹಿಂಭಾಗ ಎಡಭಾಗದ ಚಕ್ರ ಅವರ ತಲೆಯ ಮೇಲೆ ಹರಿದ ಪರಿಣಾಮ ತಲೆ ಭಾಗಶಃ ಜಜ್ಜಿ ಹೋಗಿದ್ದು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ತಕ್ಷಣ ನಾನು ಬಸ್ಸಿನಿಂದ ಕೆಳಗೆ ಇಳಿದು ನೋಡಿದೆನು ಎಂದರೆ ಸರಿಯಲ್ಲ. ಮೃತ ನಂಜನಗೂಡು ಪಟ್ಟಣ ಕಾಯಿಅಂಗಡಿ ಬೀದಿಯ ಲೇಟ್ ರಂಗಸ್ವಾಮಿ ರವರ ಮಗ ಅಂಜೂ ಎಂಬುದಾಗಿ ಅಲೇ ಇದ್ದ ಚಾಸಾ-8 ರವರಿಂದ ತಿಳಿಯಿತು ಎಂದರೆ ಸರಿಯಲ್ಲ. ನಂತರ ಸ್ಥಳಕ್ಕೆ ಸಾರ್ವಜನಿಕರು ಬಂದಿದ್ದು ನಂತರ ಬಸ್ಸನ್ನು ಸುರಕ್ಷತೆಯ ಉದ್ದೇಶದಿಂದ ಆರೋಪಿ ಅಲ್ಲೇ ಪಕ್ಕದಲ್ಲಿ ಇದ್ದ ಡಿಪೋಗೆ ತೆಗೆದುಕೊಂಡು ಹೋಗಿ ನಿಲ್ಲಿಸಿ ಸದರಿ ವಿಚಾರವನ್ನು ಚಾಸಾ-10 ರವರಿಗೆ ತಿಳಿಸಿದೆವು ಎಂದರೆ ಸರಿಯಲ್ಲ.

ಈ ಬಗ್ಗೆ ಮೃತನ ಅಕ್ಕ ಚಾಸಾ-1 ರವರು ಪೊಲೀಸರಿಗೆ ಆರೋಪಿ ವಿರುದ್ಧ ದೂರು ನೀಡಿ ಕೇಸು ದಾಖಲಾಗಿರುವ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ಈ ಸಂಬಂಧ ನಾನು ಪೊಲೀಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿ.20-08-2018 ರಂದು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡರು ಎಂದರೆ ಸರಿಯಲ್ಲ. ನಾನು ನನ್ನ ಹೇಳಿಕೆಯಲ್ಲಿ ಸೋಮಶೇಖರ ರವರು____________________ಡೋರಿನ ಬಳಿ ಇದ್ದೆನು ಎಂದು ಮೇಲೆ ಓದಿ ಹೇಳಲಾದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗೆಳೆದ ಹೇಳಿಕೆ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಬರೆದಿರುವ ವಿಚಾರ ಗೊತ್ತಿದ್ದರು ಸಹ ಆರೋಪಿ ನನ್ನ ಸಹೋದ್ಯೋಗಿ ಆದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**